ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

**23ನೇ ಮಾರ್ಚ್ 2016**
**ಬೆಂಗಳೂರು**

**'ಬೆಂಗಳೂರು ನಗರದ ನಾಗರೀಕ ಬಂಧುಗಳೇ,**

**'ಬದಲಾವಣೆ ಜಗದ ನಿಯಮ"**

ಚಲನಶೀಲವಾದ ಈ ಸಮಾಜದಲ್ಲಿ ಬದಲಾವಣೆಯೆಂಬುದು ನಿರಂತರವಾಗಿ ನಡೆಯುವ ಅನಿವಾರ್ಯ ಪ್ರಕ್ರಿಯೆಯಾಗಿದೆ. ಅದರಂತೆಯೇ ತನ್ನ ಪೌರಾಡಳಿತ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ಕಂಡಿರುವ ಬೆಂಗಳೂರು ಮಹಾನಗರ ಪಾಲಿಕೆ 2007 ರಲ್ಲಿ ಸರ್ಕಾರದ ಅಧಿಸೂಚನೆಯಾಗುವ ಮುನ್ನ, ಕೇವಲ 226 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿತ್ತು. ಅಧಿಸೂಚನೆಯ ನಂತರ ಏಳು ಸಿಎಂಸಿಗಳು, ಒಂದು ಟಿಎಂಸಿ ಹಾಗೂ 110 ಹಳ್ಳಿಗಳನ್ನು ಒಳಗೊಂಡು 800 ಚದರ ಕಿ.ಮೀ ವ್ಯಾಪ್ತಿಯ ಬೃಹತ್ ವಿಸ್ತೀರ್ಣವನ್ನು ಹೊಂದಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರೂಪಾಂತರಗೊಂಡಿತು. ಈಗ ಆಡಳಿತದ ಅನುಕೂಲಕ್ಕಾಗಿ ಪಾಲಿಕೆಯನ್ನು 8 ವಲಯ ಕಛೇರಿಗಳಾಗಿ ವಿಂಗಡಿಸಿದ್ದು, ಅವುಗಳಲ್ಲಿ 198 ವಾರ್ಡ್‌ಗಳು ಹಾಗೂ 64 ಉಪವಿಭಾಗಗಳಲ್ಲಿ ಆಡಳಿತ, ಕಾಮಗಾರಿ, ನಗರಯೋಜನೆ, ಕಂದಾಯ, ಆರೋಗ್ಯ, ಕಲ್ಯಾಣ, ಶಿಕ್ಷಣ, ಅರಣ್ಯ ಹೀಗೆ ಅನೇಕ ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ.

ಮಾಹಿತಿ ತಂತ್ರಜ್ಞಾನ ಕ್ರಾಂತಿಯಿಂದಾಗಿ ದೇಶ, ವಿದೇಶಗಳಿಂದ ಅನೇಕ ಭಾಷೆ, ಸಂಸ್ಕೃತಿಯ ಹಿನ್ನೆಲೆಯ ಜನಗಳು ಬಂದು ಸೇರಿ ವಾಸಿಸಲು ಪ್ರಾರಂಭಿಸಿದನಂತರವಂತೂ ಬೆಂಗಳೂರು ಎಂಬುದು ಕೇವಲ ಒಂದು ನಗರವಾಗಿ ಉಳಿಯದೇ ಒಂದು ಪುಟ್ಟ ಜಗತ್ತೇ (Global Village) ಆಗಿ ಹೋಗಿದೆ ಎಂದರೆ ತಪ್ಪಾಗಲಾರದು.

ಇಂತಹ ಒಂದು ವಿಶ್ವ ಮನ್ನಣೆಗೆ ಪಾತ್ರವಾಗಿರುವ, ಅಪರೂಪದ ನಮ್ಮ ನಗರವನ್ನು ಸರ್ವರೂ ಸಂತೋಷದಿಂದ ಬಾಳಲು ಯೋಗ್ಯವಾಗಿರುವಂತೆ ರೂಪಿಸುವುದು ಮತ್ತು ನಿರ್ವಹಣೆ ಮಾಡುವುದು, ಅದರ ಬೃಹತ್ ಗಾತ್ರದ ಹಿನ್ನೆಲೆಯಲ್ಲಿ ಒಂದು ಸವಾಲೇ ಸರಿ! ಆದಾಗ್ಯೂ ಪಾಲಿಕೆ ತನ್ನ ಆರ್ಥಿಕ ಇತಿ–ಮಿತಿಯೊಳಗೆ ರಾಜ್ಯ ಸರ್ಕಾರದ ಸಹಾಯದಿಂದ ರಾಜ್ಯದ ರಾಜಧಾನಿಯ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದರೊಂದಿಗೆ ನಿರ್ವಹಣೆಯನ್ನು ಮಾಡಲು ತನ್ನ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ.

ಕೆ.ಎಂ.ಸಿ ಕಾಯ್ದೆಯ ಅನುಸಾರ ಕಳೆದ ಒಂಬತ್ತು ಸಾಲುಗಳಲ್ಲಿ, ಇಲ್ಲಿಯವರೆಗೆ ಮೂರು ಬಾರಿ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಅವಕಾಶವಿದ್ದಾಗ್ಯೂ, ನಗರದ ಜನತೆಯ ಹಿತದೃಷ್ಟಿಯಿಂದ ಇಲ್ಲಿಯವರೆಗೆ, ಒಂದು ಬಾರಿಯೂ ಸಹ ತೆರಿಗೆ ಪರಿಷ್ಕರಣೆ ಮಾಡಿರುವುದಿಲ್ಲ. ಆದರೆ ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿ ಹಾಗೂ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಸೃಜನೆ ಮತ್ತು ನಿರ್ವಹಣೆ, ಕಸವಿಲೇವಾರಿ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಾವಿರಾರು ಕೋಟಿಗಳ ವೆಚ್ಚವಾಗುತ್ತಿರುವ ಹಿನ್ನೆಲೆಯಲ್ಲಿ, ಆಸ್ತಿ ತೆರಿಗೆಯ ಏರಿಕೆ ಅನಿವಾರ್ಯವಾಗಿದೆ. ಅದರಂತೆ ದಿನಾಂಕ:01/04/2016 ರಿಂದ ಜಾರಿಗೆ ಬರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆಸ್ತಿಗಳ ಆಸ್ತಿ ತೆರಿಗೆಯನ್ನು ಪರಿಷ್ಕರಿಸಲಾಗುತ್ತಿದೆ. ಈ ತೆರಿಗೆಯನ್ನು ಪಾವತಿಸಲು ಅತ್ಯಂತ ಸರಳವಾದ ತಂತ್ರಾಂಶವನ್ನು ಸಹ ಅಭಿವೃದ್ಧಿ ಪಡಿಸಲಾಗಿದೆ. ಆ ಮೂಲಕ ನೀವು ನಿಮಗೆ ಅನುಕೂಲವಾಗಿರುವ ಯಾವುದೇ ಸ್ಥಳದಿಂದ ತೆರಿಗೆ ಪಾವತಿಸಬಹುದಾಗಿದೆ.

ನಿಮ್ಮ ಕನಸಿನ ಬೆಂಗಳೂರು ನಗರದ ಅಭಿವೃದ್ದಿಗೆ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಎಂದಿನಿಂದಲೂ ಸಹಕರಿಸಿದಂತೆ, ಈ ಬಾರಿಯೂ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗಿರುವ ತೆರಿಗೆಯನ್ನು ಭರಿಸಿ, ನಗರದ ಸರ್ವತೋಮುಖ ಅಭಿವೃದ್ದಿಗೆ ನಮ್ಮೊಂದಿಗೆ ಕೈ ಜೋಡಿಸಬೇಕೆಂದು ಈ ಮೂಲಕ ಕಳಕಳಿಯಿಂದ ಕೋರುತ್ತೇನೆ.

(ಬಿ.ಎನ್.ಮಂಜುನಾಥರೆಡ್ಡಿ)
ಪೂಜ್ಯ ಮಹಾಪೌರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು